# ಯುಗಾದಿ ಲಸಿಕೆ



**ಕೊರೊನಾ ಭೀತಿಯಿಂದ ಕಂಗೆಟ್ಟ ಮನಸ್ಸುಗಳಿಗೆ ಹಬ್ಬದ ಆಚರಣೆ ಶಕ್ತಿಮದ್ದು ಇದ್ದಂತೆ. ಕೊರೊನಾ ಲಸಿಕೆ ಈಗ ಲಭ್ಯ. ಅದರೊಂದಿಗೆ ಹಬ್ಬದ ಲಸಿಕೆಯೂ ಸೇರಿಕೊಂಡು ಸಮಾಜದಲ್ಲಿ ನೆಮ್ಮದಿ ಮೂಡುವಂತಾಗಲಿ ಎನ್ನುವುದು ಹಬ್ಬದ ಆಶಯವಾಗಬೇಕು.**

**■ ಎನ್. ಶಂಕರ ರಾವ್**

ಯುಗಾದಿ ಹಬ್ಬವನ್ನು ಚಾಂದ್ರಮಾನ ಮತ್ತು ಸೌರಮಾನ ರೀತಿಯಾಗಿ ಆಚರಿಸುವ ಎರಡು ಪದ್ಧತಿ ಇದೆ. ಹಬ್ಬದ ದಿನ ಉಷಾ ಕಾಲದಲ್ಲಿ ಪರಮಾತ್ಮನ ಸ್ಮರಣೆ ಮಾಡುತ್ತಾ, ಮನೆಯ ಮುಂಭಾಗದಲ್ಲಿ ರಂಗೋಲಿ, ತೋರಣಗಳಿಂದ ಸಿಂಗರಿಸಿ, ಅಭ್ಯಂಜನ ಮಾಡಿ, ಹೊಸ ವರ್ಷದ ಪಂಚಾಂಗವನ್ನು ದೇವರ ಸಮೀಪವಿಟ್ಟು, ಕುಲದೇವತೆ ಪೂಜೆ ಮಾಡಿ, ದೈವಜ್ಞರು ಪಠಣ ಮಾಡುವ ಪಂಚಾಂಗ ಶ್ರವಣವನ್ನು ಆಲಿಸಬೇಕು. ಇದು ಹಬ್ಬದ ಪದ್ಧತಿ.

ಯುಗಾದಿ ಅಥವಾ ಉಗಾದಿ ಚೈತ್ರ ಮಾಸದ ಮೊದಲ ದಿನ. ಭಾರತದ ಅನೇಕ ಕಡೆಗಳಲ್ಲಿ ಅದು ಹೊಸ ವರ್ಷದ ಮೊದಲ ದಿನ. 'ಯುಗಾದಿ' ಪದದ ವ್ಯುತ್ಪತ್ತಿ, ಯುಗ+ಆದಿ, ಹೊಸ ಯುಗದ ಆರಂಭ ಎಂದು.

ಯುಗಾದಿಯೆಂದರೆ ಹೊಸವರ್ಷದ ಆರಂಭದ ದಿನವಾದರೂ ಭಾರತದಲ್ಲಿ ಈ ದಿನವನ್ನು ನಿರ್ಧರಿಸುವ ರೀತಿ ಹಲವಾರಿವೆ. ಮುಖ್ಯವಾಗಿ ಚಾಂದ್ರಮಾನ ಹಾಗೂ ಸೌರಮಾನ ಎಂಬ ಎರಡು ಪ್ರಭೇದಗಳಿದ್ದು, ಹಿಂದೂ ಧರ್ಮದ ವೇದಾಂಗ ಜ್ಯೋತಿಷ ಶಾಸ್ತ್ರದಿಂದ ನಿರ್ಣಯಗೊಳ್ಳುತ್ತವೆ. ಚಂದ್ರನ ಚಲನೆಯನ್ನಾಧರಿಸಿ ದಿನಗಣನೆ ಮಾಡುವುದನ್ನು ಚಾಂದ್ರಮಾನ ಹಾಗೂ ಸೂರ್ಯನ ಗತಿಯಿಂದ ಎಣಿಕೆ ಮಾಡುವುದನ್ನು ಸೌರಮಾನ ಎನ್ನುತ್ತಾರೆ. ಕರ್ನಾಟಕದ ಬಹು ಭಾಗಗಳಲ್ಲಿ ಚಾಂದ್ರಮಾನ ಪದ್ಧತಿ ರೂಢಿಯಲ್ಲಿದೆ.

ಹಸಿರು ಮಾವಿನೆಲೆಗಳ ತೋರಣದೊಂದಿಗೆ ಬೇವಿನ ಎಲೆ ಹೂಗಳ ಗೊಂಚಲನ್ನು ಮನೆಗಳ ಮುಂಬಾಗಿಲಿಗೆ ಮತ್ತು ದೇವರ ಮನೆಯ ಬಾಗಿಲಿಗೆ ಕಟ್ಟುವುದು ಹಬ್ಬದ ಸಂಭ್ರಮದ ಭಾಗ. ಯುಗಾದಿಯ ದಿನ ಸುಖದ ಸಂಕೇತವಾದ ಬೆಲ್ಲವನ್ನೂ ಮತ್ತು ಕಷ್ಟದ ಸಂಕೇತವಾದ ಬೇವನ್ನೂ ಸಮನಾಗಿ ಸ್ವೀಕರಿಸುವರು. ತಿಂದ ಮೇಲೆ ಬೆಲ್ಲವು ಹೊಟ್ಟೆಯೊಳಗೆ ಉರಿಯ ಅಥವಾ ಶಾಖವನ್ನು ಉಂಟು ಮಾಡಿದರೆ ಬೇವು ಆ ಉರಿಯ ಶಮನಕಾರಿ. ಬೇವು–ಬೆಲ್ಲದ ಮಿಶ್ರಣವನ್ನು ತಿನ್ನುವಾಗ ಹೇಳುವ ಒಂದು ಶ್ಲೋಕ ಹೀಗಿದೆ:

ಶತಾಯುಃ ವಜ್ರದೇಹಾಯ ಸರ್ವಸಂಪತ್ಕರಾಯಚ ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ

ಮೇಲಿನ ಶ್ಲೋಕದ ಅರ್ಥ ಹೀಗಿದೆ: 'ನೂರು ವರುಷಗಳ ಆಯುಷ್ಯ, ಸದೃಢ ಆರೋಗ್ಯ, ಸಕಲ ಸಂಪತ್ತುಗಳ ಪ್ರಾಪ್ತಿಗಾಗಿಯೂ, ಸಕಲ ಅರಿಷ್ಟ ನಿವಾರಣೆಗಾಗಿಯೂ ಬೇವು ಬೆಲ್ಲ ಸೇವನೆ ಮಾಡುತ್ತೇನೆ'.

ಹಬ್ಬದ ದಿನ ಒಬ್ಬಟ್ಟು ಅಥವಾ ಹೋಳಿಗೆ ಮಾಡುವುದು ಪದ್ಧತಿ. ತೆಂಗಿನಕಾಯಿ ಹೂರಣದಲ್ಲಿ ಮಾಡಿದ ಹೋಳಿಗೆ ಬಹಳ ದಿನ ಇರದೇ ಕೆಡುವುದೆಂದು, ಬೇಳೆಯ ಹೂರಣದಲ್ಲಿ ಮಾಡುವರು. ಸಂಜೆಯ ವೇಳೆಯಲ್ಲಿ ಗುರುಹಿರಿಯರ ಮನೆಗಳಿಗೆ ಹೋಗಿ ಆಶೀರ್ವಾದ ಪಡೆಯುವರು.

ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಯುಗಾದಿ ಸಂಭ್ರಮ ಜೋರು. ಆಂಧ್ರ ಮತ್ತು ಕರ್ನಾಟಕಗಳಲ್ಲಿ ಇದು ಯುಗಾದಿಯಾದರೆ, ಮಹಾರಾಷ್ಟ್ರದಲ್ಲಿ ಗುಡಿಪಾಡ್ವ. ಪಾಡ್ಯಮಿ ದಿವಸ ಗುಡಿಯನ್ನು ಏರಿಸುವುದೇ ಗುಡಿಪಾಡ್ವ. ಒಂದು ಕೋಲಿಗೆ ವಸ್ತ್ರವನ್ನು ಕಟ್ಟಿ, ಹೂವಿನ ಹಾರವನ್ನು ಏರಿಸಿ 'ಗುಡಿ' ಎಂದು ಮೂಲೆಯಲ್ಲಿ ಇರಿಸುವರು. ಇದು ಹೊಸ ವರುಷದ ಆಗಮನಕ್ಕೆ ಬಾವುಟವನ್ನು ಹಾರಿಸುವುದರ ಸಂಕೇತ.

ವಸಂತ ಋತುವಿನ ಆಗಮನದಿಂದ ಸಂತಸ ಎಲ್ಲೆಡೆ ಕಾಣುತ್ತದೆ. ವಸಂತ ಋತುಗಳ ರಾಜ, ಎಲ್ಲರ ಮನಗೆದ್ದ ತೇಜ, ಫಲಚಿಗುರಿನ ಸೃಜ, ಪ್ರಕೃತಿಯ ಋತುಮಾನಕ್ಕೆ ರಾಜ. ನವ ದಂಪತಿಗಳ ತನುಮನಕೆ ಆಹ್ಲಾದಕರ ಅನುಭವ ನೀಡುವ, ಚತುರ ಕಲೆಗಾರ. ಪ್ರಕೃತಿಯ ಮಡಿಲಿನಲಿ ಹಸಿರಿನೋಕುಳಿ ತಂಪೆರೆಯುವ ವಸಂತ, ಮಾವಿನ ಸವಿಯನೀಯುವ ಯುಗಾದಿ.

ಮತ್ತೆ ಬಂದಿದ್ದಾನೆ ವಸಂತ, ಋತುಗಳ ರಾಜ ಧೀಮಂತ, ತಳಿರು ತೋರಣಗಳ ಸೀಮಂತ, ಹಸಿರನೋಕುಳಿ ತಂಪರೆದಂತೆ. ನಮ್ಮ ಕನಸೆಲ್ಲಾ ವಸಂತದ ಬೆಳಕಿನ ಸಿಂಚನದಲಿ ಚಿಗುರಿ ನನಸಾಗಲಿ.

ಶಾರ್ವರೀ ನಾಮ ಸಂವತ್ಸರದಲ್ಲಿ ಜನರು ಕೊರೊನಾ ಭೀತಿಯಿಂದ ತತ್ತರಿಸಿ, ಜೀವನ ನಡೆಸುವ ಪರಿಸ್ಥಿತಿ ಇತ್ತು. ವೈದ್ಯಕೀಯ ಅನ್ವೇಷಣೆ ಹೊಸ ಲಸಿಕೆಯನ್ನು ಪರಿಚಯಿಸಿದೆ. ಇದರಿಂದ ಮತ್ತೆ ಮನ ಮನೆಗಳಲ್ಲಿ ಸುಖ ಶಾಂತಿ ನೆಲೆಸಲಿ. ನೂತನ 'ಶ್ರೀ ಪ್ಲವ' ನಾಮ ಸಂವತ್ಸರದ ಯುಗಾದಿ ಎಲ್ಲರ ಮನ ಮನೆಯಲ್ಲಿ ಸಂತಸ ತರಲಿ.

ಪ್ರತಿಕ್ರಿಯಿಸಿ: feedback@sudha.co.in